| |
|---|
| **Deposition Sheets (RP.No.57)**<br>**Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1615/2022**

ಪಿ.ಡಬ್ಲ್ಯು : 6 ಸಿ.ಡಬ್ಲ್ಯು : 11

ಸಾಕ್ಷಿದಾರನ ಹೆಸರು : ಇಸ್ಮಾಯಿಲ್
ತಂದೆಯ ಹೆಸರು : ಅಬ್ದುಲ್ಲಾ
ಪ್ರಾಯ : 44 ವರ್ಷ
ಉದ್ಯೋಗ : ಗುಜರಿ ಅಂಗಡಿ
ವಾಸ : ಬೆಳ್ತಂಗಡಿ

ದಿನಾಂಕ 28-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

1 ನೇ ಆರೋಪಿ ಪರಿಚಯವಿರುದಿಲ್ಲ. ನನ್ನ ಸಮಕ್ಷಮ ಯಾವುದೇ ವ್ಯಕ್ತಿ ಕಳುವು ಮಾಡಿದ ಜಾನುವಾರು ಕಟ್ಟಿ ಹಾಕಿದ ಸ್ಥಳವನ್ನು ತೋರಿಸಿ ಕೊಟ್ಟಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮಹಜರು ಮಾಡಿ ಭಾವಚಿತ್ರ ತೆಗೆದಿರುವುದಿಲ್ಲ. ಸಾಕ್ಷಿಯು ದಿಃ 09-06-2022 ರ ಆರೋಪಿ ತೋರಿಸಿಕೊಟ್ಟಂತೆ ಜಾನುವಾರು ಕಟ್ಟಿದ್ದ ಸ್ಥಳದ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಎಲ್ಲಿ, ಯಾವಾಗ, ಯಾವ ವಿಚಾರಕ್ಕಾಗಿ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಸಾಕ್ಷಿಯು ಸದ್ರಿ ಮಹಜರು ವೇಳೆ ತೆಗೆದ ಭಾವಚಿತ್ರದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಭಾವಚಿತ್ರವನ್ನು ನಿಪಿ-10

ಎಂದು ಗುರುತಿಸಲಾಯಿತು. ಪೋಲಿಸರು ಹೇಳಿದ ಮೇರೆಗೆ ಭಾವಚಿತ್ರಕ್ಕೆ ನಿಂತಿದ್ದು, ಯಾವ ಉದ್ದೇಶಕ್ಕಾಗಿ ಭಾವಚಿತ್ರ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು</u> : <u>**ಸಹಾಯಕ ಸರ್ಕಾರಿ ಅಭಿಯೋಜಕರುಃ-**</u>

ದಿಃ 09-06-2022 ರಂದು ಪೋಲಿಸರು 1 ನೇ ಆರೋಪಿ ತೋರಿಸಿಕೊಟ್ಟಂತೆ ಮೂಡಬಿದ್ರೆ ತಾಲೂಕು, ಪುತ್ತಿಗೆ ಗ್ರಾಮದ, ಹುದೇಲು ಎಂಬಲ್ಲಿ ಸರ್ಕಾರಿ ಹಾಡಿಯಲ್ಲಿ ಕಳುವು ಮಾಡಿದ ಜಾನುವಾರು ಕಟ್ಟಿದ್ದ ಸ್ಥಳದ ಮಹಜರನ್ನು ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ನನ್ನ ಹಾಗೂ ಚಾಸಾ-12 ರವರ ಸಮಕ್ಷಮ ತಯಾರಿಸಿ, ಭಾವಚಿತ್ರ ತೆಗೆದು ಸ್ಥಳದಲ್ಲಿಯೇ ಮಹಜರಿಗೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : ಆರೋಪಿತರ ಪರ : ಶ್ರೀ ಬಿ.ಎಮ್.ಎಸ್ ವಕೀಲರಿಂದ ಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ